**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.**

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 02.02.2024
ಮು. ಪಾಟಿ ಸವಾಲು : 5 ನೇ ಪ್ರತಿವಾದಿ ಪರ ಶ್ರೀ ಎನ್.ಎಂ.ಎಸ್ ವಕೀಲರಿಂದ

ನನ್ನ ಮಾವ ಮರಿಗೌಡರಿಗೆ ಸೇರಿದ ದಾವಾ ಸ್ವತ್ತುಗಳನ್ನು ಕೆ.ಐ.ಎ.ಡಿ.ಬಿ ರವರು ಭೂ ಸ್ವಾಧೀನಪಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮರಿಗೌಡರಿಗೆ ಸೇರಿದ ಸ್ವತ್ತುಗಳನ್ನು ಹೊರತುಪಡಿಸಿ ನನ್ನ ತಾತನಿಗೆ ಸೇರಿದ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ನಾವೆಲ್ಲಾ ಒಟ್ಟಿಗೆ ಇರುವ ಕಾರಣ ದಾವಾ ಸ್ವತ್ತುಗಳೆಲ್ಲಾ ನನ್ನ ತಾತನಿಗೆ ಸೇರಿದ್ದು ಎಂದು ನುಡಿಯುತ್ತಾರೆ.

ಮಲ್ಲಮ್ಮ/1 ನೇ ಪ್ರತಿವಾದಿ ಎನ್ನುವವರು ನನ್ನ ಅಜ್ಜಿ. 2 ಮತ್ತು 3 ನೇ ಪ್ರತಿವಾದಿಗಳು ನನ್ನ ಮಾವಂದಿರು. 1991 ಸಾಲಿನಲ್ಲಿ ನನ್ನ ಅಜ್ಜಿ ಹಾಗೂ 1 ರಿಂದ 4 ನೇ ಪ್ರತಿವಾದಿಗಳು ಕೆಲವೊಂದು ಸ್ವತ್ತುಗಳಲ್ಲಿ ವಿಭಾಗವಾಗಿತ್ತು ಎಂದರೆ ಸುಳ್ಳು. ದಾವಾ ಸ್ವತ್ತುಗಳಲ್ಲಿ ಕಾರ್ಖಾನೆಗಳು ಇದ್ದು ಸ್ವತ್ತುಗಳೆಲ್ಲಾ ಅಭಿವೃದ್ದಿಯಾಗಿದೆ ಎಂದರೆ ಸುಳ್ಳು. ಪ್ರಸ್ತುತ ಈ ದಿನದಲ್ಲಿ ದಾವಾ ಸ್ವತ್ತುಗಳಲ್ಲಿ ಯಾವ ಕಂಪನಿ ಸ್ವಾಧೀನವಿರುತ್ತದೆ ಎಂದರೆ ಸಾಕ್ಷಿಯು ಯಾವುದೇ ಕಂಪನಿಯ ಸ್ವಾಧೀನದಲ್ಲಿ ದಾವಾ ಸ್ವತ್ತುಗಳು ಇಲ್ಲವೆಂದು ನುಡಿಯುತ್ತಾರೆ. ದಾವಾ ಸ್ವತ್ತುಗಳನ್ನು ಸೇರಿಸಿ ಸುಮಾರು 240 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ ರವರು ಭೂ ಸ್ವಾಧೀನಪಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮಾವಂದಿರ ಜೊತೆ ಈ ಮೊದಲು ನಾವು ಒಟ್ಟು ಕುಟುಂಬದಲ್ಲಿ ವಾಸವಿಲ್ಲ. ಈ ದಾವೆ ಸಲ್ಲಿಸಲು ದಾಖಲೆಗಳನ್ನು ನನ್ನ ಮಾವ ಮರಿಸ್ವಾಮಿ ರವರ ಮಗ ಸ್ವಾಮಿ ಒದಗಿಸಿಕೊಟ್ಟಿದ್ದಾರೆ ಎಂದರೆ ಸುಳ್ಳು. ದಾವಾ ಸ್ವತ್ತುಗಳು ಹಾಗೂ ಈ ದಾವೆಯಲ್ಲಿ ನಮೂದಿಸಿರುವ ಪಕ್ಷಗಾರರ ನಡುವೆ ಈ ದಾವೆಯನ್ನು ಹೊರತುಪಡಿಸಿ ಬೇರೆ ಇನ್ಯಾವ ನ್ಯಾಯಾಲಯಗಳೂ ಕೂಡ ದಾವೆಗಳು ಇರುವುದಿಲ್ಲ.

ದಾವಾ ಸ್ವತ್ತುಗಳು ಹಾಗೂ ಉಭಯ ಪಕ್ಷಗಾರರ ಮಧ್ಯೆ ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಶ್ರೀರಂಗಪಟ್ಟಣದಲ್ಲಿ ಅಸಲು ದಾವಾಃ 65/2019 ರಂತೆ ದಾವೆ ಚಾಲ್ತಿಯಲ್ಲಿರುತ್ತದೆ ಎಂದರೆ ಗೊತ್ತಿಲ್ಲ. ಅಸಲು ದಾವಾಃ 65/2019 ರಲ್ಲಿ ಈ ಪ್ರಸ್ತುತ ದಾವೆಯ ವಿಚಾರವನ್ನು ನಮೂದಿಸಿಲ್ಲ ಅದೇ ರೀತಿ ಈ ದಾವೆಯಲ್ಲಿ ಅಸಲು ದಾವಾಃ 65/2019 ರ ಬಗ್ಗೆ ತಿಳಿಸಿಲ್ಲ ಸದರಿ ವಿಚಾರವನ್ನು ಮರೆಮಾಚಿ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಕೆ.ಐ.ಎ.ಡಿ.ಬಿ ರವರು ಸ್ವಾಧೀನಪಡಿಸಿಕೊಂಡ ನಂತರ

ಪರಿಹಾರ ನೀಡಿದ್ದು ಸದರಿ ಪರಿಹಾರವನ್ನು ನನ್ನಮಾವ ಮರಿಗೌಡರು ಹಾಗೂ ಅವರ ಕುಟುಂಬದ ಸದಸ್ಯರು ಈಗಾಗಲೇ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಕೂಡ ನನ್ನ ಮಾವ ಮರಿಗೌಡರ ಮಕ್ಕಳ ಜೊತೆ ನಾನುಷರೀಕ್ಕಾಗಿ ಈ ಸುಳ್ಳು ದಾವೆಯನ್ನು ಪ್ರತಿವಾದಿ-5 ವಿರುದ್ದ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.